<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 15317-2016

ಸಿಡಬ್ಲೂ - 50ಪಿಡಬ್ಲೂ-15

| | |
|---|---|
| ಸಾಕ್ಷಿದಾರರ ಹೆಸರು | : ಜಿ. ಪ್ರವೀಣ ಬಾಬು |
| ತಂದೆಯ ಹೆಸರು | : ಗುರುಸಿದ್ಧಯ್ಯ |
| ವಯಸ್ಸು | : 51 ವರ್ಷ |
| ಕೆಲಸ | : ಪಿಐ, ಮಹದೇವಪುರ ಪೊ. ಠಾ |
| ವಾಸ | : ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು ದಿ. 08-05-2015 ರಿಂದ ದಿ. 05-06-2017 ರವರೆಗೆ ಸೋಲದೇವನಹಳ್ಳಿ ಪೋಲೀಸ್ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 31-01-2016 ರಂದು ಸಪ್ತಗಿರಿ ಕಾಲೇಜಿನ ಜನಪ್ರೀಯ ಅಪಾರ್ಟಮೆಂಟ್ ಹತ್ತಿರ ಗಸ್ತಿನಲ್ಲಿದ್ದಾಗ ಸಂಜೆ 07.30 ಗಂಟೆಯ ಸಮಯದಲ್ಲಿ ಒಬ್ಬ ವ್ಯಕ್ತಿಗೆ ಯಾರೋ ಹಲ್ಲೆ ಮಾಡುತ್ತಿರುವ ಬಗ್ಗೆ ತಿಳಿದು ಬಂದ ಕಾರಣ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ, ನನ್ನನ್ನು ನೋಡಿ ಸ್ಥಳದಲ್ಲಿದ್ದ ಜನರು ಓಡಿ ಹೋಗಿರುತ್ತಾರೆ. ನಂತರ ಗಾಯಾಳುವಿನ ಮಾಹಿತಿ ಪಡೆದು, ಆತನನ್ನು ಇಲಾಖಾ ಜೀಪಿನಲ್ಲಿ ಚಿಕಿತ್ಸೆಗಾಗಿ ಎನ್ ಆರ್ ಆಸ್ಪತ್ರೆಗೆ ದಾಖಲಿಸಿರುತ್ತೇನೆ.

ನಂತರೆ ಮಾಹಿತಿದಾರರಿಂದ ತಿಳಿದು ಬಂದ ಸಂಗತಿ ಏನೆಂದರೇ ಸದರಿ ಗಾಯಾಳು ಕಾರ ನಂ. ಕೆಎ 03 ಎಂ ಎಫ್ 9 ಪಿಯೇತ್ ಪಾಲಿಯೊ ವಾಹನದ ಮೂಲಕ ಅಪಘಾತ ಮಾಡಿದ ಕಾರಣ ಸ್ಥಳದಲ್ಲಿ ಶ್ರೀಮತಿ ಶಬಾನಾ ತಾಜ್ ಎಂಬವವರು ಅಪಘಾತದಿಂದ ಮೃತಪಟ್ಟಿದ್ದು ಮತ್ತು ಆಕೆಯ ಗಂಡನಿಗೆ ಗಾಯಗಳಾಗಿದ್ದು ಆ ಕಾರಣ ಸ್ಥಳದಲ್ಲಿದ್ದ ಸಾರ್ವಜನಿಕರು ಕಾರನ್ನು ತಡೆದು ಅದಕ್ಕೆ ಬೆಂಕಿ ಹಚ್ಚಿ ಆತನ ಮೇಲೆ ಹಲ್ಲೆ ಮಾಡಿರುವುದಾಗಿ ತಿಳಿದು ಬಂದಿರುತ್ತದೆ.

ಅದೇ ಸಮಯಕ್ಕೆ ಸಿಬ್ಬಂದಿಗಳು ಸಪ್ತಗಿರಿ ಕಾಲೇಜು ಬಳಿ ಮತ್ತೊಂದು ಕೆಂಪು ಬಣ್ಣದ ವ್ಯಾಗನಾರ್ ಕಾರ ನಂ. ಕೆಎ 05 ಎಂಎ 4757 ವಾಹನವನ್ನು ತಡೆದು ಕಾರಿನಲ್ಲಿದ್ದ

ವ್ಯಕ್ತಿಗಳ ಮೇಲೆ ಸಹ ಹಲ್ಲೆ ಮಾಡಿ ಆ ಕಾರಿಗೂ ಬೆಂಕಿ ಹಚ್ಚಿರುವುದಾಗಿಯೂ ಮತ್ತು ಸಿಬ್ಬಂದಿಗಳು ಸದರಿ ಕಾರಿನಲ್ಲಿದ್ದ ಜಮೀನ್ ಇಬ್ರಾಹೀಂ ಎಂಬುವವರನ್ನು ಸಪ್ತಗಿರಿ ಆಸ್ಪತ್ರೆಗೆ ಆ ಕಳುಹಿಸಿರುವುದಾಗಿ ತಿಳಿಸಿರುತ್ತಾರೆ.

ಅದೇ ಸಮಯದಲ್ಲಿ ಮೃತಳ ಸಂಬಂಧಿಕರು ನಾನು ಚಿಕಿತ್ಸೆಗೆ ದಾಖಲಿಸಿದ್ದ ಗಾಯಾಳುವನ್ನು ತಮ್ಮ ವಶಕ್ಕೆ ನೀಡುವಂತೆ ಗಲಾಟೆ ಮಾಡುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಆ ಕಾರಣ ನಾನು ಸದರಿ ಸ್ಥಳಕ್ಕೆ ಬೇಟಿ ನೀಡಿ ಗುಂಪನ್ನು ಚದುರಿಸಿರುತ್ತೇನೆ. ನಂತರ ಅದೇ ದಿನ ರಾತ್ರಿ 09.30 ಗಂಟೆಗೆ ಗಾಯಾಳುವನ್ನು ಠಾಣೆಗೆ ಕರೆದುಕೊಂಡು ಬಂದು ಅವರು ನೀಡಿದ ಲಿಖಿತ ದೂರನ್ನು ಸ್ವಿಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 29/2016 ರಂತೆ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ರಚಿಸಿ ಅದನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಇಲಾಖಾ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯ ಸದರಿ ಪ್ರಥಮ ವರ್ತಮಾನ ವರದಿಯನ್ನು ಮತ್ತು ದೂರನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.14 ಅಮತ್ತು 15 ಎಂದು ಹಾಗೂ ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ. 14 ಎ ಮತ್ತು 15 ಎ ಎಂದು ಗುರುತಿಸಲಾಯಿತು.

ದೂರು ದಾಖಲಿಸಿದ ನಂತರ ಚಾಸಾ 1 ರವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೆ. ಸಿ. ಜನರಲ್ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ. ದಿ. 01-02-2016 ರಂದು ಚಾಸಾ 1 ರವರು ಸ್ಥಳದಲ್ಲಿ ಪಂಚರ ಸಮಕ್ಷಮ ನಿಪಿ. 1 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ. 1 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 1 ಬಿ ಎಂದು ಗುರುತಿಸಲಾಯಿತು. ನಿಪಿ. 1 ರಲ್ಲಿ ಕಣ್ಣತಪ್ಪಿನಿಂದ ವರ್ಷ 2016 ಎಂದು ಬರೆಯುವ ಜಾಗದಲ್ಲಿ 2015 ಎಂದು ಬರೆಯಲಾಗಿದೆ. ನಿಪಿ. 1 ರ ಕಾಲದಲ್ಲಿ ಸ್ಥಳದಲ್ಲಿದ್ದ ಸುಟ್ಟಿರುವ ಮು. ಮಾ 1 ರಿಂದ 9 ರ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಮಾಲು ಅಮಾನತ್ತು ಪಡಿಸಿಕೊಂಡ ಬಗ್ಗೆ ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿರುತ್ತೇನೆ. ಅದೇ ದಿನ ಚಾಸಾ 1 ರವರು

ತೋರಿಸಿದ ಸ್ಥಳಕ್ಕೆ ಬೇಟಿ ಚಾಸಾ 11 ಮತ್ತು 12 ರವರ ಸಮಕ್ಷಮ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ತಯಾರು ಮಾಡಿ ಸದರಿ ಸ್ಥಳದಲ್ಲಿದ್ದ ಘಟನೆಗೆ ಸಂಬಂಧಿಸಿದ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ. 16 ಎಂದು ಸಾಕ್ಷಿಯ ಸಹಿಯನ್ನು ನಿಪಿ. 16 ಎ ಎಂದು ಗುರುತಿಸಲಾಯಿತು

ನಿಪಿ. 16 ರಲ್ಲಿ ಅಮಾನತ್ತು ಪಡಿಸಿಕೊಂಡ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುದ್ದ ಮಾಲುಗಳಾಗಿ ಗುರುತಿಸಿದ್ದು ಸಾಕ್ಷಿಯು ಅವುಗಳನ್ನು ಮು. ಮಾ 1 ರಿಂದ 9 ನ್ನು ನೋಡಿ ಗುರುತಿಸಿರುತ್ತಾರೆ.

ದಿ. 03-02-2016 ರಂದು ಈ ಪ್ರಕರಣದಲ್ಲಿ ನೊಂದ ಮಹಿಳೆಯ ಹೇಳಿಕೆಯನ್ನು ಪಡೆದು ಆಕೆಯ ಹೇಳಿಕೆಯ ಆಧಾರದ ಮೇಲೆ ಕಲಂ 354 ಐಪಿಸಿಯನ್ನು ಅಳವಡಿಸಿಕೊಳ್ಳಲು ನ್ಯಾಯಾಲಯದ ಅನುಮತಿಯನ್ನು ಪಡೆದಿರುತ್ತೇನೆ. ಆರೋಪಿ ಪತ್ತೆಗಾಗಿ ನೇಮಿಸಲಾಗಿದ್ದ ಸಿಬ್ಬಂದಿಗಳು ಆರೋಪಿಗಳಾದ 1 ರಿಂದ 5 ನೇ ಆರೋಪಿಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ಅವರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ. ಮರುದಿನ ಆರೋಪಿಗಳನ್ನು ನಿಯಮಾನುಸಾರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು 1 ರಿಂದ 9 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ 6 ರಿಂದ 9 ನೇ ಆರೋಪಿಗಳನ್ನು ಸಹ ಹಾಜರುಪಡಿಸಿದ್ದು ನಿಯಮಾನುಸಾರ ಅವರನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಂತರ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ಆರೋಪಿ ನಂತರ ಇಲಾಖಾಗಿ ಆದೇಶದ ಮೇರೆಗೆ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 56 ರವರಿಗೆ ವರ್ಗಾವಣೆ ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ದೂರಿನಲ್ಲಿ ಆರೋಪಿಗಳ ಹೆಸರು ನಿಖರವಾಗಿ ಹೇಳಿಲ್ಲಾ ಎಂದರೆ ಸರಿ. ದೂರು ಕೊಟ್ಟ ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅಷ್ಟರಲ್ಲಿ ಕೃತ್ಯ ನಡೆದು ಹೋಗಿರುತ್ತದೆ ಎಂದರೆ ಸಾಕ್ಷಿಯು ಕೇಲವು ಸಹ ಘಟನೆ ನಡೆಯುತ್ತಿದ್ದಾಗ ಹೋಗಿರುತ್ತೇನೆ ಎಂದು ಹೇಳುತ್ತಾರೆ. ಘಟನೆ ನಡೆಯುವಾಗ ತುಂಬಾ ಜನ ಸೇರಿದ್ದರು ಎಂದರೆ ಸರಿ. ಇಂತಿಂತಹ ಆರೋಪಿಗಳು ಕೃತ್ಯ ಮಾಡಿದ್ದಾರೆ ಎಂದು ಹೇಳಲಾಗುವವುದಿಲ್ಲ ಎಂದರೆ ನಮ್ಮ ಸಿಬ್ಬಂದಿ ವಿಡಿಯೋ ಮತ್ತು ಪೋಟೊವನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ವಿಡಿಯೋ ಮತ್ತು ಪೋಟೊಗಳಲ್ಲಿ ಈ ಕೇಸಿನ ಆರೋಪಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ಪಂಚನಾಮೆಯನ್ನು ದಿ. 01-02-2016 ರಂದು ಮಾಡಿರುತ್ತೇನೆ. ದಿ. 01-02-2016 ರಂದು ನಾನು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿ ಠಾಣೆಯಲ್ಲಿ ತಯಾರಿಸಿದ ಮಹಜರ್ ನಾನು ಸಹಿ ಹಾಕಿದ್ದೇನೆ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚ ಸಾಕ್ಷಿದಾರರು ನಮ್ಮ ಠಾಣೆಯ ಖಾಯಂ ಸಾಕ್ಷಿದಾರರು ಎಂದರೆ ಸರಿಯಲ್ಲ. ಘಟನೆಯ ಸಮಯದಲ್ಲಿ ನಾನು ಗಸ್ತಿನಲ್ಲಿದ್ದೆ. ನಾನು ಹೇಳಿದ ಹಾಗೇ ಯಾವುದೇ ಘಟನೆ ಆಗಿಲ್ಲ, ಅಂಕಿ-ಅಂಶಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಚೆನ್ನಾಗಿಯೇ ಇದ್ದರು. ಯಾವುದೇ ತೀವ್ರ ಸ್ವರೂಪದ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೆಸಿಗೂ ಘಟನೆಗೂ ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ